ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 3, Nov-Dec, 2022, Pp. 70-76.**
**©*IIMRD*, Mysuru.**
IIMRD JOURNALS
**www.iimrd.com**

# ಸಗರನಾಡಿನ ಸಾಂಸ್ಕೃತಿಕ ದರ್ಶನ

**ಕರೆಣ್ಣ ಭೀಮಣ್ಣ ದೇವಪುರ***
*ಸಂಶೋಧಕರು, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

***ಸಾರಾಂಶ: (Abstract)***

*ಶರಣರು ತಮ್ಮ ಹೊಸ ವ್ಯವಸ್ಥೆಯ ಬದುಕಿನಲ್ಲಿ ಮತ್ತು ಅದರ ಭವಿಷ್ಯದ ಬಗ್ಗೆ ಕಂಡುಕೊಂಡ ಅತ್ಯಂತ ಮುಖ್ಯವಾದ ವಿಚಾರವೆಂದರೆ, ತಮ್ಮ ಆಲೋಚನೆಯಲ್ಲಿದ್ದ ಆದರ್ಶ ಸಮಾಜ ರಚನೆಯ ಸ್ಪಷ್ಟ ಕಲ್ಪನೆ. ಆದರೆ ಆ ಕುರಿತು ಒಂದು ಪ್ರಣಾಳಿಕೆಯನ್ನೇ ಶರಣರು ಮಾಡಿಕೊಂಡಿದ್ದರೆಂದು ಅರ್ಥವಲ್ಲ; ಅಥವಾ, ಸಮಾಜದ ರಚನೆ ಮುಂತಾದ ವಿಷಯಗಳನ್ನೇ ಕುರಿತು ಶರಣರೆಂದೂ ಒಬ್ಬ ಸಂಶೋಧಕನಂತೆ ಕೃತಿ ರಚನೆ ಮಾಡಿದವರಲ್ಲ, ಹಾಗೆ ನೋಡಿದರೆ ಶರಣರ ಸಾಮಾಜಿಕ ಬದುಕಿನಿಂದ ಆ ಬಗೆಯ ನಿರೀಕ್ಷೆ ಮೂಲಭೂತವಾಗಿ ಸೂಕ್ತವೆನಿಸಲಾರದು ಬದಲಾಗಿ ತಮ್ಮ ತೀವ್ರಚಿಂತನೆ ನಿರಂತರ ಅಧ್ಯಯನ ಮತ್ತು ಗಂಭೀರ ಚರ್ಚೆಗಳಿಂದ ಮೂಡಿ ಬಂದ ಸಾಮಾಜಿಕ ಧೋರಣೆಯನ್ನು ಬಲವಾಗಿ ಪ್ರತಿಪಾದಿಸುತ್ತ, ನಿಜಬದುಕಿನ ಜೊತೆ ಜೊತೆಗೆ ಆ ಧೋರಣೆಯನ್ನು ನಡೆಸಿಕೊಂಡು ಬದುಕಿದವರು ಶರಣರು. ಆದ್ದರಿಂದ ಸಮಗ್ರ ವಚನ ಸಾಹಿತ್ಯದಲ್ಲಿ ಮಾತ್ರ ಆ ಸಾಮಾಜಿಕ–ಧಾರ್ಮಿಕ ವಿಷಯಗಳೇ ಅಲ್ಲದೆ ಆರ್ಥಿಕ ವಿಷಯ ವ್ಯಕ್ತಿ ಸ್ವಾತಂತ್ರ್ಯದ ಸ್ವರೂಪವೇ ಮುಂತಾದ ವಿಷಯಗಳನ್ನು ಅವುಗಳ ಸಮಗ್ರ ದೃಷ್ಟಿಯ ಹಿನ್ನಲೆಯಲ್ಲಿ ಹೆಕ್ಕಿ ನೋಡಬೇಕಾದುದು ಅನಿವಾರ್ಯವೆನಿಸುತ್ತದೆ.*

***ಮುಖ್ಯಪದಗಳು: (Keywords)*** *ಕನ್ನಡ ಸಾಹಿತ್ಯ, ವಚನ ಸಾಹಿತ್ಯ, ಸಗರನಾಡು, ಶಿವ ಶರಣರು.*

**ಪೀಠಿಕೆ**

ಪ್ರತಿಯೊಂದು ವಚನದಲ್ಲೂ ಸಮಗ್ರತೆಯ ಹಿನ್ನೆಲೆವುಳ್ಳ ಸಾರ್ವಕಾಲಿಕ ಮೌಲ್ಯ. ಒಂದು ನಿಶ್ಚಿತ ಧೋರಣೆಯ ಸೈದ್ಧಾಂತಿಕ ಪ್ರತಿಪಾದನೆಯನ್ನು ಮನಗಾಣಬಹುದಾಗಿದೆ. ಹಾಗೆಯೇ ಶರಣರ ಸಾಮಾಜಿಕ–ಧಾರ್ಮಿಕ ವಿಷಯದಲ್ಲಿ ಗಮನಾರ್ಹವಾದ ಮತ್ತೊಂದು ಅಂಶವೆಂದರೆ ತಮಗೂ ಜನಕೋಟಿಗೂ ನಡುವೆ ವೈದಿಕರು ಕಟ್ಟಿಕೊಂಡಿದ್ದ ವಂತೀಯ ಪರದೆಯನ್ನು ಶರಣರು ಸಮಾನತೆಯ ಕಠಾರಿಯಿಂದ ಸೀಳಿ, ತಮ್ಮ ದರ್ಶನ ವಿಸ್ತೀರ್ಣವನ್ನು ಹೆಚ್ಚಿಸಿಕೊಂಡರು, ತಮ್ಮ ಚಿಂತನೆಯಲ್ಲಿ ಮತ್ತು ಜನಿತ ಮೌಲಿಕ ವಿಚಾರಗಳಿಗೆ ಅಗ್ರಮನ್ನಣೆಯನ್ನಿತ್ತರು, ತತ್ಪರಿಣಾಮವಾಗಿ ಮಾನವನನ್ನು ಮೊದಲು ಮಾನವನನ್ನಾಗಿ ಪ್ರೀತಿಸಿ, ಅವನ ಶೀಲ ಚಾರಿತ್ರ್ಯಗಳನ್ನು ಗೌರವಿಸಬೇಕೆಂಬುದು ಶರಣರ ಚಿಂತನೆ ಮೂಲ ಧಾತುವೆನಿಸಿತು.

*Please cite this article as: ಕರೆಣ್ಣ ಭೀಮಣ್ಣ ದೇವಪುರ.* (2022). ಸಗರನಾಡಿನ ಸಾಂಸ್ಕೃತಿಕ ದರ್ಶನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(3). ಪು.ಸಂ. 70–76.*

ಹೀಗೆ, ಈ ನಿಟ್ಟಿನಲ್ಲಿ ಯೋಚಿಸಿದಾಗ ವಚನಗಳ ಸೃಷ್ಟಿಯಲ್ಲಿ ಮೂಲದಲ್ಲಿ ಪ್ರಮುಖವಾದ ಎರಡು ಅಂಶಗಳು ಗೋಚರವಾಗುತ್ತವೆ; ಒಂದು ಪ್ರಾಚೀನ ಉಪನಿಷತ್ತುಗಳ ಧಾಟಿ ಎರಡು ಸಮಕಾಲೀನ ಸಾಮಾಜಿಕ ಬದುಕಿನ ತುರ್ತು ಅವಶ್ಯಕತೆ. ಹೀಗೆ ಪ್ರಾಚೀನ ಅರ್ವಾಚೀನ ಚಿಂತನೆಗಳೆರಡೂ ವಚನಗಳಲ್ಲಿ ಸಕ್ರಿಯವಾಗಿ ಸಂಗಮಗೊಂಡು, ತತ್ಫಲವಾದ ಅನುಪಮ ವಿಶ್ವಮಾನವತ್ವದ ಆಸ್ತಿತ್ವಕ್ಕೆ ಅದು ಜೀವಸತ್ವವಾಗಿ ಪರಿಣಮಿಸಿದೆ. ಅದ್ದರಿಂದಲೇ, ಉಪನಿಷತ್ತುಗಳ ಪ್ರಖರವಾದ ಬೆಳಕಿನಲ್ಲಿ ಹೇಗೆ ಒಂದು ಪರಿಪೂರ್ಣ ಸಮಾಜವ್ಯವಸ್ಥೆಯನ್ನು ಕಲ್ಪಿಸಿಕೊಳ್ಳಬಹುದಾಗಿದೆಯೋ ಹಾಗೆಯೇ ಅಗಾಧ ಜ್ಞಾನ ಸಂಪತ್ತುಳ್ಳ ವಚನ ಸಾಹಿತ್ಯದಿಂದಲೂ ಶುದ್ಧಾಂಗವೂ ಪರಿಪೂರ್ಣವೂ ಆದ ಒಂದು ಆದರ್ಶ ಸಮಾಜ ವ್ಯವಸ್ಥೆಯನ್ನು ಕಲ್ಪಿಸಿಕೊಳ್ಳಬಹುದಾಗಿದೆ.

**ಸಾಮಾಜಿಕ ವ್ಯವಸ್ಥೆ**

ಕರ್ನಾಟಕ ಚರಿತ್ರೆಯಲ್ಲಿ 12ನೇ ಶತಮಾನ ಒಂದು ಉಜ್ವಲ ಯುಗ ಅಂದು ಅಸಂಖ್ಯಾತ ಶಿವಶರಣರು ಕಲ್ಯಾಣದಲ್ಲಿ ಕೇಂದ್ರಿಕೃತವಾಗಿ, ತಮ್ಮ ಪ್ರಖರವಾದ ವೈಚಾರಿಕ ಪ್ರಜ್ಞೆಯಿಂದ ಅದ್ಭುತ ಕ್ರಾಂತಿಯನ್ನು ಎಸಗಿ, ಸಮಾಜದ ಗತಿಯನ್ನೇ ಬದಲಿಸಿದರು. ನಾಡಿನ ನರನಾಡಿಗಳಲ್ಲಿ ನವಚೈತನ್ಯ ತುಂಬಿ ಬದುಕಿಗೊಂದು ಹೊಸ ಅರ್ಥವನ್ನು ತಂದುಕೊಟ್ಟರು ಜೀವನದ ಎಲ್ಲ ರಂಗಗಳಲ್ಲಿ ವ್ಯಾಪಿಸಿದ್ದ ಅಜ್ಞಾನ–ಅಂಧಕಾರ–ಅಸಮಾನತೆಗಳನ್ನು ತೊಡೆದು ಸುಜ್ಞಾನ ಸುವರ್ಣಕಿರಣಗಳ್ನು ಬೀರಿದರು.

ಇಂಥ ಒಂದು ವಿನೂತನ ಕ್ರಾಂತಿ. ವಿಶಿಷ್ಟ ಚಳುವಳಿ ಆ ಕಾಲಕ್ಕೆ ಒಮ್ಮಲೆ ಆರಂಭವಾಗಲು ಕಾರಣವೇನು? ಅದಕ್ಕೆ ದೊರೆತ ಪ್ರೇರಣೆಗಳು ಯಾವವು? ಆ ಚಳುವಳಿಯಲ್ಲಿ ಪಾಲ್ಗೊಂಡ ವ್ಯಕ್ತಿಗಳು ಯಾರು? ಎಂಥವರು? ಅವರಿಗೆ ಈ ಚಳುವಳಿ ಕೈಕೊಳ್ಳಲು ಒದಗಿ ಬಂದ ಅನಿವಾರ್ಯತೆಗಳು ಯಾವವು? ಇವೇ ಮೊದಲಾದ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಂಡಾಗ ಅದರ ಅದ್ವಿತೀಯತೆ ಹಾಗೂ ಅಪೂರ್ವತೆಗಳು ಸುಸ್ಪಷ್ಟವಾಗುತ್ತವೆ.

ಯಾವುದೇ ಕ್ರಾಂತಿ ಅಥವಾ ಚಳುವಳಿ ಒಮ್ಮೆಲೆ ತಟ್ಟನೆ ಉದ್ಭೂತವಾದುದಲ್ಲ; ಅದು ಯಾವುದೇ ಒಬ್ಬ ವ್ಯಕ್ತಿ ಹುಟ್ಟುಹಾಕಿದುದೂ ಅಲ್ಲ, ಅದರ ಹಿಂದೆ ಅಗೋಚರವಾದ ಸುದೀರ್ಘ ಸುಪ್ತ ಕ್ರಿಯಾಚರಣೆ ನಡೆದಿರುತ್ತದೆ. ಅನೇಕ ವ್ಯಕ್ತಿಗಳ ಅಂತರಂಗದ ತುಮುಲ ಕಾರಣವಾಗಿ ಕಾಲ ಪಕ್ವವಾದಾಗ ಅದು ಹೊರ ಹೊಮ್ಮುತ್ತದೆ. ಅದು ವ್ಯಷ್ಟಿ ಸೃಷ್ಟಿಯಲ್ಲ; ಸಮಷ್ಟಿ ಸಾಧನೆ "ಸಾಮೂಹಿಕವಾಗಿ ಸಮಷ್ಟಿ ಮನಸ್ಸನ್ನು ಜಾಗ್ರತಗೊಳಿಸಿ, ಕಾರ್ಯೋನ್ಮುಖವಾಗುವಂತೆ ಮಾಡಲು ಕೈಕೊಳ್ಳುವ ಬಹುಜನರ ಬಹುಮುಖ ಪ್ರಯತ್ನಗಳು ನಿರಂತರ ಕ್ರಿಯಾಶೀಲತೆಯ ಸಾಧನೆಗಳು ಸರಣಿಯೇ ಚಳುವಳಿ ಇದರ ಪರಿಣಾಮವಾಗಿ ಸಮಾಜದಲ್ಲಿ ಮೂಡುವ ತೀವ್ರವಾದ ಪ್ರತಿಕ್ರಿಯೆ ಮತ್ತು ಪರಿಣಾಮಗಳೇ ಕ್ರಾಂತಿ ಎನಿಸುತ್ತವೆ."

12ನೇ ಶತಮಾನ ಕಾಲದ ಸಾಮಾಜಿಕ ಪರಿಸರ ಅಶಾಂತಿಮಯವಾಗಿತ್ತು, ವೈದಿಕರು ಹುಟ್ಟು ಹಾಕಿದ ವರ್ಗಭೇದ – ವರ್ಣಭೇದ – ಲಿಂಗಭೇದ – ವರ್ಣಾಶ್ರಮ ಧರ್ಮಗಳು ಜನಜೀವನಕ್ಕೆ ಶೃಖಲೆಗಳಾಗಿ ಪರಿಣಮಿಸಿದ್ದವು, ವಿದ್ಯೆ ಅಧಿಕಾರ ಅಂತಸ್ತು ಸಂಪತ್ತು ಈ ಎಲ್ಲಾ ಅವಕಾಶಗಳು ಕೇವಲ ಪ್ರಭುವರ್ಗ, ಪುರೋಹಿತವರ್ಗಗಳಿಗೆ ಮಾತ್ರ ಮೀಸಲಾಗಿದ್ದು ಸಾಮಾನ್ಯ ಜನ ಇವೆಲ್ಲದರಿಂದ ವಂಚಿತವಾಗಿ ಅಜ್ಞಾನ–ದಾರಿದ್ರ್ಯಗಳಲ್ಲಿ ನರಳುವಂತಾಗಿತ್ತು, ದುಡಿಯುವವನೊಬ್ಬನಾದರೆ ದುಡಿದುದನ್ನು ಹಾಯಾಗಿ ಕುಳಿತು

ಉಣ್ಣುವವ ಮತ್ತೊಬ್ಬನಾಗಿದ್ದ, ದುಡಿಮೆಗೆ ತಕ್ಕ ಗೌರವವಿರಲಿಲ್ಲ, ಮೇಲಿಂದ ಮೇಲೆ ಯುದ್ಧಗಳಿಂದಾಗಿ ನೆಮ್ಮದಿ ಇಲ್ಲದಾಗಿತ್ತು, ಯುದ್ದ ಕಾರಣವಾಗಿ ಉಂಟಾಗುವ ಪ್ರಾಣ ಹಾನಿ ಆರ್ಥಿಕ ಹಾನಿಗಳನ್ನು ಸಾಮಾನ್ಯ ಕಾಯಕಜೀವಿಗಳು ವೃತ್ತಿನಿರತರು ಭರಿಸಬೇಕಾಗಿತ್ತು, ಅರಸರು ಪುರೋಹಿತರು, ವ್ಯಾಪಾರಿಗಳು ಇದರ ಲಾಭವನ್ನು ಪಡೆದು ಸಾಮಾನ್ಯರನ್ನು ಮತ್ತಷ್ಟು ಶೋಷಣೆಗೆ ಗುರಿ ಮಾಡುತ್ತಿದ್ದರು, ಚಾಲುಕ್ಯರು ಅರಸರ ಕಾಲದ ಶಾಸನ–ಕಾವ್ಯಗಳಲ್ಲಿ ಇದಕ್ಕೆ ಅನೇಕ ನಿದರ್ಶನಗಳು ದೊರೆಯುತ್ತವೆ. ಈ ಅವಧಿಯಲ್ಲಿ ಜನರ ಮೇಲೆ ಹಾಕುತ್ತಿದ್ದ ತೆರಿಗೆಗಳಿಗೆ ಲೆಕ್ಕವಿರಲಿಲ್ಲ, ಅಕ್ಕಸಾಲೆ,ನಾಯಿಂದ, ಅಗಸ, ಅಂಬಿಗ ಕಮ್ಮಾರ, ಕುಂಬಾರ ಮೊದಲಾದವರು ತೆರಿಗೆ ಕೊಡಬೇಕಾಗಿತ್ತು, ಇದಲ್ಲದೆ ಗಾಣದತೆರೆ ನೂಲತೆರೆ, ಮಗ್ಗದತೆರೆ ಬಣ್ಣದೆಲೆ, ಜುಕುಮೆದೆರೆ ಹೀಗೆ ಎಲ್ಲಾ ವೃತ್ತಿಯವರಿಂದಲೂ ತೆರಿಗೆ ವಸೂಲು ಮಾಡಲಾಗುತ್ತಿತ್ತು. ಉಪ್ಪು ಮಾಡುವವರ ಮೇಲೆ ಸುಂಕ, ಹಡಗದ ತೆಪ್ಪಗಳಿಗೆ ಸುಂಕ ಬುಟ್ಟಿ ಹೆಣೆವವರ ಮೇಲೆ ಸುಂಕ–ಹೀಗೆ ತೆರಿಗೆ ಭಾರದಿಂದ ಸಾಮಾನ್ಯ ಜನ ತತ್ತರಿಸಿ ಹೋಗಿತ್ತು, ಆ ಕಾಲದಲ್ಲಿ ವೈಭವದಿಂದ ತಲೆಯೆತ್ತಿದ ಮಠ–ಮಂದಿರಗಳು ಶೋಷಣೆಯ ಕೇಂದ್ರಗಳಾಗಿದ್ದವು. ಅಗ್ರಹಾರಗಳಲ್ಲಿ ವೈದಿಕರಿಗೆ ಬೇಕಾದ ಆಧ್ಯಾತ್ಮ ವಿದ್ಯಾಭ್ಯಾಸ ಮಾತ್ರ ನಡೆಯುತ್ತಿತ್ತು, ಅದರಿಂದ ದೊರೆಯಬಹುದೆಂದು ಭಾವಿಸಿದ್ದ ಮೋಕ್ಷದ್ವಾರ ಅವರಿಗೆ ಮಾತ್ರ ತೆರೆದು ಇತರರಿಗೆ ಮುಚ್ಚಿಕೊಂಡಿತ್ತು.

'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂಬ ಮನುವಿನ ಉಕ್ತಿಯಿಂದ ಸ್ತ್ರೀ ಬಂಧಿತಳಾಗಿ ಕೇವಲ ಕೆಲಸದ ಆಳಾಗಿದ್ದರು. ಭೋಗದ ವಸ್ತುವೆನಿಸಿದ್ದಳು. ವಿದ್ಯೆ ವಿಚಾರ ಸ್ವಾತಂತ್ರ್ಯಗಳು ಅವಳಿಗೆ ಕನಸಿನ ಮಾತುಗಳಾಗಿದ್ದವು, ಸಾಮಾನ್ಯ ಜನ ತಮ್ಮ ಕಷ್ಟನಷ್ಟಗಳ ಪರಿಹಾರಕ್ಕಾಗಿ ಮಾರಿ ಮಸಣಿ ಕಾಳಿ ದುರ್ಗಿ ಮೈಲಾರ ಚೌಡಿ ಮೊದಲಾದ ಕ್ಷುದ್ರದೈವಗಳಲ್ಲಿ ಮೊರೆ ಹೋಗಿ ಪ್ರಾಣಿಬಲಿ ಉಗ್ರ ಆಚರಣೆಗಳಲ್ಲಿ ತೊಡಗಿ ಇನ್ನಷ್ಟು ತೊಂದರೆ ಅಶಾಂತಿಗಳನ್ನು ತಂದುಕೊಂಡರು. ಮೂಢನಂಬಿಕೆಗೆ ತುತ್ತಾಗಿ ಅವರ ಬದುಕು ಜರ್ಜರಿತವಾಗಿತ್ತು, ಇಂಥ ಸ್ಥಿತಿಯನ್ನು ಕಂಡ ಶರಣರು ಸಮಾಜದ ಶುದ್ಧಗಾಗಿ ಸಮಾನತೆ–ಶಾಂತಿ–ನೆಮ್ಮದಿಗಾಗಿ ಪ್ರಥಮತಃ ತಮ್ಮನ್ನು ಪಣವಾಗಿಟ್ಟರು. ಆದರೆ ಶರಣರು ಈ ಎಲ್ಲಾ ವರ್ಗಗಳಿಗೂ ಅಂತ್ಯ ಹಾಡಲು 12ನೇ ಶತಮಾನದ ಶರಣರು ಪಣತೊಟ್ಟು ತಮ್ಮದೇ ಆದ ಸಾಮಾನ್ಯ ವರ್ಗದ ಬೆನ್ನೆಲುಬಾಗಿ ನಿಂತು ಅನುಭವ ಮಂಟಪವನ್ನು ಕಟ್ಟಿ ಸಾಮಾನ್ಯರಿಗೂ ಜೀವನ ಇದೆ ಎಂದು ಇಡೀ ಸಮಾಜಕ್ಕೆ ತೋರಿಸಿಕೊಟ್ಟರು. ಸಮಾಜದಲ್ಲಿ ಇದ್ದ ಜಾತಿ, ವರ್ಗ, ವರ್ಣ ಎಲ್ಲವನ್ನು ಸಮಾಜದಿಂದ ಇತಕ್ಕೆಂದರು ಒಂದು ಹೊಸ ಸಮಾಜವನ್ನು ನಿರ್ಮಿಸಿ ಸಮಾಜವನ್ನು ಉದ್ದರಿಸಿದರು. ಸಮಾಜಕ್ಕೆ ಅಂಟಿಕೊಂಡಿದ್ದ ಮೂಢನಂಬಿಕೆಗಳನ್ನು ಸಮಾಜದಿಂದ ದೂರವಿರಲು ಸಾಮಾನ್ಯರಿಗೂ ತಿಳಿಯುವ ಹಾಗೇ ವಚನಗಳನ್ನು ರಚಿಸಿ ಸಮಾಜಕ್ಕೂ ಕೆಟ್ಟದು–ಒಳ್ಳೆಯದು ಯಾವುದು ಎಂಬುದನ್ನು ತಿಳಿ ಹೇಳಿದರು.

**ಧಾರ್ಮಿಕ ವ್ಯವಸ್ಥೆ**

ಶರಣರ ಸಾಮಾಜಿಕ–ಧಾರ್ಮಿಕ ಸಮಾನತೆಯ ದೃಷ್ಟಿಯಲ್ಲಿ ಪ್ರಾಚೀನ ಸಮಾಜ ವ್ಯವಸೆಗಳ ಇತಿಹಾಸವನ್ನು ಅಧ್ಯಯನ ಮಾಡುವಾಗ ಗಮನಿಸಬೇಕಾದ ಎರಡು ಸಮಾಜ ವ್ಯವಸ್ಥೆಗಳೆಂದರೆ, ಒಂದು ಪ್ರಾಚೀನ ಗ್ರೀಕರದು, ಇನ್ನೊಂದು ವೈದಿಕರದು. 'ಪ್ಲೇಟೊ ರಿಪಬ್ಲಿಕ್‌ನ ಜೊತೆ ಜೊತೆಯಲ್ಲಿ ಹಿಂದೂ ಧರ್ಮವನ್ನು ಅಧ್ಯಯನ ಮಾಡುವಾಗ ಗೋಚರವಾಗುವ ಅತ್ಯಂತ ಮುಖ್ಯವಾದ ಒಂದಾಂಶವೆಂದರೆ ಈ

ಎರಡೂ ಸಮಾಜಗಳ ಸಮಾಜ ರಚನೆಯಲ್ಲಿ ಸಾಮ್ಯ.. ಅಲ್ಲದೆ ಪ್ಲೇಟೊ ಸಿಫಾರಸ್ಸು ಮಾಡಿದ ಸಮಾಜ ರಚನೆಗೂ ಹಿಂದೂ ಸಮಾಜ ರಚನೆಗೂ ಯಾವ ವ್ಯತ್ಯಾಸವೂ ಇಲ್ಲವೆಂಬುದು ಯುರೋಪಿನ ಹಲವಾರು ವಿದ್ವಾಂಸರ ಅಭಿಪ್ರಾಯವಾಗಿದೆ. ಅಂದರೆ ಈ ಸಮಾಜ ರಚನೆ ಇಂಡಿಯಾದ ಜಾತಿ ಪದ್ಧತಿಗೆ ಮೂಲವೆಂಬುದು ಇದರರ್ಥ' ಅರ್ಥಾಥ್ ಗ್ರೀಕ ತತ್ವಜ್ಞಾನದ ಮೇಧಾವಿ ಎನಿಸಿರುವ ಪ್ಲೇಟೊ ಕೂಡ ಮಾನವರನ್ನು ಕುರಿತ ಈ ಬಗೆಯ ವಿಭಜನೆ ಯಾವುದೇ ಸಮಾಜಕ್ಕೆ ಸಹಜವಾದುದಲ್ಲ, ಶಾಶ್ವತವಾಗಿರುವಂಥದೂ ಅಲ್ಲ, ಅಥವಾ ಉಚ್ಚ ಆದರ್ಶವಂತೂ ಖಂಡಿತಾ ಆಗಲಾರದೆಂಬ ಮುಂದಾಲೋಚನೆಯಿಂದ ವಂಚಿತನಾದ ಆದರೆ ಧಾರ್ಮಿಕ ಇತಿಹಾಸದೊಳಗಡಿಗಿದ್ದ ಈ ಸಾಮಾಜಿಕ ಸೋಲನ್ನು ಶರಣರು ಮನಗಂಡವರಾಗಿದ್ದರೆಂದು ತೋರುತ್ತದೆ. ವೈದಿಕ ಸಮಾಜವು ವಿಸ್ತರಣ ಹಾಗೂ ಆಧುನೀಕರಣದತ್ತ ನಡೆದಂತೆಲ್ಲ ವ್ಯವಸ್ಥೆಯನ್ನು ಧರ್ಮದ ಹೆಸರಿನಲ್ಲಿ ಜಟಿಲಗೊಳಿಸಿ ಅದನ್ನೆ ಬಲವಾಗಿ ಅಪ್ಪಿಕೊಳ್ಳುವ ನಿರಂತರ ಹವಣಿಕೆಯಲ್ಲಿ ನಡೆಯತೊಡಗಿದಾಗ ಆ ವರ್ಣ ವ್ಯವಸ್ಥೆಯನ್ನು ಪ್ರತಿಪಾದಿಸುವ ಶಾಸ್ತ್ರಗಳನ್ನು ಖಂಡಿಸುತ್ತ ಆ ಶಾಸ್ತ್ರಗಳನ್ನು ಬರೆದ ಋಷಿಗಳ ಜಾತಿಗಳನ್ನೆ ಶರಣರು ಪ್ರಶ್ನಿಸ ತೊಡಗಿದರು.

> ***"ವೇದಶಾಸ್ತ್ರಕ್ಕೆ ಹಾರುವನಾಗಿ***
> ***ವೀರವಿತರಣಕ್ಕೆ ಕ್ಷತ್ರಿಯನಾಗಿ***
> ***ಸರ್ವನಾರೈದು ನೋಡುವಲ್ಲಿ ವೈಶ್ಯನಾಗಿ ವ್ಯಾಪಾರದೊಳಗಾಗಿ***
> ***ಕೃಷಿಯ ಮಾಡುವುದಕ್ಕೆ ಶೂದ್ರನಾಗಿ***
> ***ಇಂತೀ ಜಾತಿ ಗೋತ್ರದೊಳಗಾದ ನೀಚಶ್ರೇಷ್ಠನೆಂಬ***
> ***ಎರಡು ಕುಲವಲ್ಲದೆ***
> ***ಹೊಲೆ ಹದಿನೆಂಟು ಜಾತಿಯೆಂಬ ಕುಲವಿಲ್ಲ,***
> ***ಬ್ರಹ್ಮವನರಿದಲ್ಲಿ ಬ್ರಾಹ್ಮಣ***
> ***ಸರ್ವಜೀವಹತಕರ್ಮಕ್ಕೊಳಗಾಗಿದ್ದಲ್ಲಿ ಸಮಗಾರ,***
> ***ಈ ಉಭಯವನರಿದು ಮರೆಯಲಿಲ್ಲ.***
> ***ಕೈಯುಳಿ ಕತ್ತಿ ಅಡೆಗುಂಟಕ್ಕಡಿಯಾಗಬೇಡ***
> ***ಅರಿನಿಜಾತ್ಮರಾಮರಾಮನಾ"***

ಮೇಲೆ ಹೇಳಿರುವ ತನ್ನ ಎರಡು ವಚನಗಳಲ್ಲೂ ಚನ್ನಯ್ಯ ಎತ್ತಿಕೊಂಡಿರುವುದು ತುಂಬ ಸರಳವಾದ ವಿಚಾರ. ಸರ್ವಜ್ಞಾನವನ್ನು ಹೊಂದಲು ಅಥವಾ ಬ್ರಹ್ಮವನ್ನೆಲ್ಲಾ ಅರಿಯಲು ಬ್ರಾಹ್ಮಣನೆಂಬ ಜಾತಿ ಯಾಕೆ ಬೇಕು? ಜಾತಿಯಲ್ಲಿ ಬ್ರಾಹ್ಮಣನಾಗಿದ್ದು ವ್ಯಕ್ತಿ ಚಾರಿತ್ರ್ಯದಲ್ಲಿ ನೀಚನಾದರೆ ಬ್ರಾಹ್ಮಣ್ಯನೆಂಬುದರ ಅರ್ಥವೇನು? ಅದೇ ಇನ್ನೊಬ್ಬ ಜಾತಿಯಲ್ಲಿ ಹೊಲೆಮಾದಿಗನಾಗಿದ್ದು, ವ್ಯಕ್ತಿ ಚಾರಿತ್ರ್ಯದಲ್ಲಿ ಶ್ರೇಷ್ಠವೆನಿಸಿದ್ದರೆ ಹೊಲೆ ಮಾದಿಗರು ಕೀಳೆಂಬ ತರ್ಕಕ್ಕೆ ತಳವೆಲ್ಲಿದೆ? ಹೀಗೆ ಈ ವಿಚಾರದಿಂದಲೂ ವಂಚಿತರಾದವರನ್ನು ಜೋಡು ಹೊಲೆಯುವ ಕೈ ಯುಳಿ ಕತ್ತಿ ಮತ್ತು ಜೋಡಿನ ಅಡಿಗಂಟಕ್ಕೂ ಕಡೆಯಾದವರು ಎನ್ನುತ್ತಾನೆ. ಚೆನ್ನಯ್ಯ.

ಆದರೆ ಹಾಗೆ ಅವರನ್ನು ಕಡೆಗಣಿಸುವಷ್ಟಕ್ಕೆ ಈ ವಚನದ ಅರ್ಥ ನಿಂತು ಬಿಡುವುದಿಲ್ಲವೆಂಬುದನ್ನು ಎಚ್ಚರದಿಂದ ಲಕ್ಷಿಸಬೇಕು, ಏಕೆಂದರೆ ಕೈಯುಳಿ ಕತ್ತಿ ಅಡೆಗುಂಟಕ್ಕಡಿಯಾಗಬೇಡ'ಎಂದ ಚನ್ನಯ್ಯ, ಹಾಗೆ ಅಡಿಯಾಳಾಗಿ ಆ ಸ್ಥಿತಿಯಲ್ಲಿರುವವನ್ನು 'ಅರಿನಿಜಾತ್ಮ ರಾಮನಾಮನಾ' ಎಂದು ಮೇಲೆತ್ತಿಕೊಳ್ಳುತ್ತಾನೆ. ಅಲ್ಲದೆ ಸಮಸ್ತ ಮಾನವ ಸಮುದಾಯವನ್ನು ಕೇವಲ ಗುಣಗಳ ಆಧಾರದ ಮೇಲೆ 'ಉಚ್ಚ' ಅಥವಾ 'ನೀಚ'ನೆಂಬ ಗುಣವಾಚಕಗಳಿಂದ ಕರೆಯಬಹುದೇ ಹೊರತು ಬ್ರಾಹ್ಮಣ ಅಥವಾ ಹೊಲೆಯನೆಂಬ ಜಾತಿ ಕಾರಣದಿಂದಲ್ಲವೆಂದು ಚನ್ನಯ್ಯ ಸ್ಪಷ್ಟಪಡಿಸುತ್ತಾನೆ. ಈ ನಡಾವಳಿಯಲ್ಲಿ ಮುಂದುವರಿದ ಶರಣರು ಎತ್ತಿ ಹಿಡಿದ ಒಂದು ಉನ್ನತ ಸಾಮಾಜಿಕ ಆದರ್ಶದ ಅರಿವು ಕಾಲಕಾಲದ ಶರಣರ ವಚನಗಳಲ್ಲಿ ಎಷ್ಟೊಂದು ತೀವ್ರಗತಿಯಲ್ಲಿ ಮುಂದೆ ಸಾಗಿದೆ ಎಂಬುದನ್ನು ವಚನಗಳಲ್ಲಿ ಕಾಣಬಹುದಾಗಿದೆ.

ಏಕೆಂದರೆ ಶಾಸ್ತ್ರಗಳನ್ನು ಕುರಿತ ಶರಣರ ಆ ಬಗೆಯ ಟೀಕೆ ಬರಿಯ ಟೀಕೆಯ ಹಂತದಲ್ಲೆ ನಿಂತುಹೋಗುವುದಿಲ್ಲ ಅಷ್ಟೆ ಏಕೆ? ಅದು ಬರಿಯ ಟೀಕೆ ಮಾತ್ರವಲ್ಲ ಅವುಗಳನ್ನು ಕುರಿತಂತೆ ಹಗುರವಾದ ವಿಡಂಬನೆಯೂ ಆ ವಚನದಲ್ಲಿವೆ. ಆದರೆ ಆ ಟೀಕೆ ಮತ್ತು ವಿಡಂಬನೆ ಹಿಂದೆ ಅತ್ಯಂತ ಬಲಿಷ್ಠವಾದ ಒಂದು ಸೈದ್ಧಾಂತಿಕ ವಿಚಾರವಿದಯೆಂಬುದನ್ನು ಗ್ರಹಿಸಬೇಕು; ವೈದಿಕ ಧರ್ಮ ಸಮಾಜ ವ್ಯವಸ್ಥೆ ಹಾಗೂ ಅದರ ಶಾಸ್ತ್ರಾದಿಗಳನ್ನು ಸಾಧ್ಯಂತರದವರೆಗೂ ಟೀಕಿಸಿ ವಿಡಂಬಿಸುವ ನೆವದಲ್ಲಿ ಶರಣರು ಒಂದು ಆದರ್ಶತವಂ ಸಮಾಜ ವ್ಯವಸ್ಥೆಯ ಅನಿವಾರ್ಯತೆಯನ್ನು ಪ್ರತಿಪಾದಿಸುತ್ತಿದ್ದಾರೆ ಎಂಬುದನ್ನು ಮನಗಾಣಬೇಕು. ಹುಟ್ಟು ಮತ್ತು ಕುಲಗಳ ಆಧಾರದ ಮೇಲೆ ಒಂದು ವ್ಯಕ್ತಿತ್ವದ ಸ್ಥಾನ ನಿರ್ಣಯವೆಂಬ ಕೃತಕ ವಿಭಜನೆಯನ್ನು ಧಾರ್ಮಿಕ ಸಿದ್ಧಾಂತವನ್ನಾಗಿ ಆಚರಣೆಯಲ್ಲಿ ತಂದು ಅದನ್ನು ಕರ್ಮನಿಷ್ಠೆಯ ಹೆಸರಿನಲ್ಲಿ ವ್ಯಕ್ತಿಯ ಧಾರ್ಮಿಕ ಸ್ವಾತಂತ್ರ್ಯ ಮತ್ತು ಸಾಮಾಜಿಕ ಸಮಾನತೆಯ ಹಕ್ಕು ಬಾಧ್ಯತೆಗಳನ್ನು ಹರಣ ಮಾಡುತ್ತ ಬಂದ ವೈದಿಕ ಧರ್ಮ ಮತ್ತು ಸಮಾಜದ ನಡಾವಳಿಯನ್ನು ಟೀಕಿಸುತ್ತಾರೆ. ಹಾಗೆ ಮಾಡುವಾಗ ಸಕಲ ಜೀವಾತ್ಮರೂ ಸಮಾನರೆಂಬ ಹೊಸ ವಿಚಾರದ ಭೂಮಿಕೆಯ ಮೇಲೆ ಸೂಚಿಸಿರುವ ವಚನಗಳ ಇಂಗಿತವಾಗಿದೆ. ಅದೇ ತಮ್ಮ ಸಿದ್ಧಾಂತವನ್ನು ಮಂಡಿಸುವಾಗ ತಮಗಿಂತ ಹಿಂದಿನ ವಿಚಾರಗಳ ಶಾಶ್ವತ ಮೌಲ್ಯಗಳನ್ನು ಶರಣರು ತಮ್ಮ ಮುಂದಿರಿಸಿಕೊಂಡೇ ಸಾಗಿರುವುದನ್ನು ಮರೆಯುವಂತಿಲ್ಲ.

ಮಾನವ ಚೇತನದ ಸರ್ವಾಂಗೀಣ ಬೆಳವಣಿಗೆಯ ಔನ್ನತ್ಯದ ಸಲುವಾಗಿ ಧರ್ಮವೇ ಹೊರತು ಧರ್ಮದ ಸಲುವಾಗಿಯೇ ಮಾನವ ಯಜ್ಞಪಶುವಲ್ಲವೆಂಬ ಸಾಮಾನ್ಯ ಮಾತೊಂದಿದೆ. ಹಾಗಲ್ಲದೆ ಧರ್ಮವೆಂಬುದರ ಸಲುವಾಗಿ ಆತ್ಮರೆಲ್ಲರೂ ಹತರಾಗಬೇಕೆಂಬಂದಾರೆ ಅಂಥ ಧರ್ಮ ಮತ್ತು ಅದರ ಶಾಸ್ತ್ರಾದಿಗಳಾದ ಎನ್ನುತ್ತಾರೆ ಶರಣರು. ಈ ಅತ್ಯುನ್ನತ ಮಾನವತಾವಾದ, ಶರಣರ ಸಮಗ್ರ ವಚನಗಳಲ್ಲಿ ನೆಲೆಗೊಂಡಿರುವುದನ್ನು ವೈದಿಕ ಧರ್ಮ ಮತ್ತು ಅದರ ವ್ಯವಸ್ಥೆಯ ಹಿನ್ನೆಲೆಯಲ್ಲಿ ಮನಗಾಣಬೇಕಾಗುತ್ತದೆ. ಎಂತಲೇ ಶರಣರು ವಿಪ್ರ–ಹೊಲೆಯ ಅಥವಾ ಹೆಣ್ಣು ಗಂಡೆಂಬ ಭೇದಕ್ಕಿಂತ ಆತ್ಮವೇ ಶ್ರೇಷ್ಠವೂ, ಆ ಸಕಲಾತ್ಮರೂ ಸಮಾನರೆಂಬ ಉಚ್ಚತಮ ಧ್ಯೇಯವನ್ನು ಮುಂದೆ ಮಾಡಿಕೊಂಡು ವೈದಿಕ ಧರ್ಮಸಮಾಜದ ಜಾತಿ ಸೂಚಕ ಆಚರಣೆಗಳನ್ನು ಪ್ರಶ್ನಿಸಿದರು.

***"ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದಿತ್ತೇ ?***

***ಒಡಯನ ಪ್ರಾಣಕ್ಕೆ ಇದ್ದಿತ್ತೆ ಯಜ್ಞೋಪವೀತ ?***

***ಕಡೆಯಲಿದದ ಅಂತ್ಯಜನು ಹಿಡಿದಿದ್ದನೆ–***

***ಪ್ರಾಣದಲ್ಲಿ ಹಿಡಿಗೋಲ ?***

***ನೀ ತೊಡಕಿಕ್ಕಿದ ತೊಡಕನೀ***

***ಲೋಕದ ಜಡರೆತ್ತ ಬಲ್ಲರೈ ರಾಮನಾಥ" ?***

ಹೀಗೆ ಮೇಲೆ ಸೂಚಿಸಿರುವ ಪ್ರತಿಯೊಂದು ವಚನದ ಹಿಂದೆಯೂ ಯಾವುದೇ ಧರ್ಮಕ್ಕಿಂತ ವ್ಯಕ್ತಿ ಅಥವಾ ಮಾನವನ ನಡೆನುಡಿಗಳಿಗೆ ಅಗ್ರ ಮನ್ನಣೆಯನ್ನು ಕೊಡಲಾಗಿದೆ. ಅಂತೆಯೇ ವರ್ಣವ್ಯವಸ್ಥೆ ಕಂಡರಿಯದ ಧಾರ್ಮಿಕ ಸಮಾನತೆಯನ್ನು ಶರಣ ವ್ಯವಸ್ಥೆ ತೋರಿಸಿಕೊಟ್ಟಿದೆ.

**ಆರ್ಥಿಕ ವ್ಯವಸ್ಥೆ**

ಶರಣ ಸಮಾಜದ ಅರ್ಥವ್ಯವಸ್ಥೆಗೆ ಸಂಬಂಧಿಸಿದ ಚಿಂತನೆ ಕೂಡ ಆಯಾ ವಚನಗಳಲ್ಲಿ ಹರಡಿಕೊಂಡಿದೆ. ಶರಣರ ಸಮಾಜ ವ್ಯವಸ್ಥೆಯಲ್ಲಿ ಸಾಮಾಜಿಕ ಧಾರ್ಮಿಕ ಸಮಾನತೆಯ ವಿಚಾರಗಳೇ ತುಂಬಾ ಪ್ರಧಾನವಾಗಿ ಕಾಣುತ್ತವೆ. ಎಂಬುದೇನೋ ನಿಜವೇ ಹಾಗೆಂದ ಮಾತ್ರಕ್ಕೆ ಆರ್ಥಿಕ ವಿಚಾರಗಳಿಗೆ ಶರಣರು ಮಹತ್ವ ಕೊಟ್ಟಿಲ್ಲವೆಂದೇನೂ ಅರ್ಥವಲ್ಲ, ಹಾಗೆಯೇ ಶರಣರು ಸಾಮಾಜಿಕ ಧಾರ್ಮಿಕ ಸಮಾನತೆಯನ್ನು ಎಷ್ಟು ಬಲವಾಗಿಯೂ ತೀವ್ರವಾಗಿಯೂ ಪ್ರತಿಪಾದಿಸಿರುವುರೋ ಅಷ್ಟರ ಮಟ್ಟಿಗೆ ಆರ್ಥಿಕ ಸಮಾನತೆಯನ್ನು ಪ್ರತಿಪಾದಿಸಿಲ್ಲವೆಂದೂ ಸತ್ಯವೇ ಆದರೆ ಆರ್ಥಿಕ ಸಮಾನತೆ ಅಥವಾ ಆ ವಿಚಾರವನ್ನೇ ಶರಣರು ಗೌಣವಾಗಿ ಕಂಡಿದ್ದಾರೆ ಎಂದಾಗಲಿ ಅಥವಾ ಕಡೆಗಣಿಸಿದ್ದಾರೆ ಎಂದಾಗಲಿ ಹೇಳ ಬರುವಂತಿಲ್ಲ, ಅಥವಾ ಇದನ್ನು ಇನ್ನೂ ಸ್ವಲ್ಪ ವಿಶದಡಿಸುವುದಾದರೆ ಶರಣರು ಒಂದು ಹೊಸ ಧಾರ್ಮಿಕ ಹಾದಿಯನ್ನು ನಿರ್ಮಿಸಿದರು. ಆ ಹೊಸ ಹಾದಿಯಲ್ಲಿ ಪ್ರಧಾನವಾಗಿ ನಡೆದದ್ದು ಧಾರ್ಮಿಕ ಆಂದೋಲನ ಹಾಗೂ ತತ್ಸಂಬಂಧಿತ ವೈಚಾರಿಕತೆ ಕ್ರಾಂತಿ; ಅಥವಾ ಚಿಂತನೆಯ ಧಾತುವಿನಲ್ಲಿ ಒಂದು ಅಪೂರ್ವ ಬದಲಾವಣೆ ಹಾಗೆಯೇ ಶರಣರ ಆಂದೋಲನದ ಪರಮೋದ್ದೇಶ ಸಾಮಾಜಿಕ ಪರಿವರ್ತನೆ ಅವರದು ಆಧ್ಯಾತ್ಮಿಕವೂ ಅಹಿಂಸಾ ಮೂಲವೂ ಆದ ಮಾರ್ಗ; ವೈದಿಕ ಧರ್ಮ ಹಾಗೂ ಸಮಾಜ ವ್ಯವಸ್ಥೆ ಯಾವ ಸಾಮಾಜಿಕ ಸಮಾನತೆ ಮತ್ತು ಸ್ವಾತಂತ್ರ್ಯದಿಂದ ವಂಚಿತವಾಗಿತ್ತೊ ಅಥವಾ ಕಡೆಗಣಿಸಿತ್ತೊ ಅದನ್ನು ಶರಣರ ಧರ್ಮ ಹಾಗೂ ಸಮಾಜ ವ್ಯವಸ್ಥೆ ಪ್ರಧಾನವಾಗಿ ಪರಿಗಣಿಸಿತ್ತು. ಹಾಗಾಗಿ ಹೊಸದೊಂದು ಧಾರ್ಮಿಕ ಹಾದಿಯಲ್ಲಿ ನಡೆದ ಆ ಸಾಮಾಜಿಕ ಸಂಗ್ರಾಮದಲ್ಲಿ ಆರ್ಥಿಕ ಸಮಾನತೆಯೂ ಒಂದು ಮುಖ್ಯ ವಿಷಯವಾಗಿತ್ತೆಂಬುದರಲ್ಲಿ ಅನುಮಾನವಿಲ್ಲ. ಆದರೆ. ಆದರೆ ಈ ಆರ್ಥಿಕ ಸಮಾನತೆಯನ್ನೇ ಪ್ರತ್ಯೇಕಪಡಿಸಿ ಅಥವಾ ಪ್ರಧಾನವೆಂದು ಪರಿಗಣಿಸಿ ಶರಣರು ವಿಚಾರ ಮಾಡಿರುವುದಿಲ್ಲ. ಬದಲಾಗಿ ಶರಣರ ಸಮಾಜ–ವ್ಯವಸ್ಥೆಯ ಧಾರ್ಮಿಕ–ಸಾಮಾಜಿಕ ಮುಂತಾದ ಹಲವು ಅನಿವಾರ್ಯ ಅಂಗಗಳಲ್ಲಿ ಆರ್ಥಿಕ ಆಲೋಚನೆ ಆ ಧರ್ಮ ಹಾಗೂ ಸಾಮಾಜಿಕ ಔನ್ನತ್ಯದ ಮಟ್ಟಿಗೆ ಮಾತ್ರ ಸೀಮಿತಗೊಂಡಿರುತ್ತದೆ. ಅದೇ ಅದರಾಚೆಗಿನ ವ್ಯಕ್ತಿಯ ಆರ್ಥಿಕ ಸಮೃದ್ಧಿಯ ಯತ್ನ ಆರ್ಥಿಕ ಅಪರಾಧ ಅಥವಾ ಅದಕ್ಕಿಂತಲೂ ಗಂಭೀರವಾದ ಸಾಮಾಜಿಕ ಅಪರಾಧ ಇಲ್ಲವೇ 'ತುಡುಗು' ಎಂದೆನಿಸಿದೆ. ಆದರೆ ಈ ಸೀಮಿತ ಆರ್ಥಿಕ ಸಮಾನತೆ ಕೂಡ ವ್ಯಕ್ತಿಯ ವೈಯಕ್ತಿಕ ಸ್ವಾವಲಂಬನೆಯ ವಿಚಾರವನ್ನು ಕಡೆಗಣಿಸಿಲ್ಲವೆಂಬುದನ್ನು ಮರೆಯುವಂತಿಲ್ಲ. ಇದೇ

ವಾದವನ್ನು ಇನ್ನಷ್ಟು ಸಮಕಾಲೀನಗೊಳಿಸಿದ ಮುಂದುರಿಸುವುದಾದರೆ, ಶರಣರ ಆರ್ಥಿಕ ಆಲೋಚನೆ ಆಧುನಿಕ ಯುಗದ ಆಸ್ತಿಯ ಹಕ್ಕು ಅಥವಾ ಖಾಸಗಿ ಆಸ್ತಿ ಮುಂತಾದ ವಿಚಾರಗಳಿಗೆ ತೀರಾ ವಿರುದ್ಧವಾಗಿದೆ. ಒಬ್ಬ ಶರಣ ಶ್ರೇಷ್ಠನಿಂದು ಹಿಡಿದು ಇನ್ನೊಬ್ಬ ಸಾಮಾನ್ಯ ಭಕ್ತನವರೆಗೂ ದುಡಿಯದೇ ಯಾರು ಉಣ್ಣುವಂತಿಲ್ಲ. ಹಾಗೆ ನೋಡಿದರೆ ಕೇವಲ ಈ ಆರ್ಥಿಕ ವಿಚಾರದ ಸಲುವಾಗಿ ಶರಣರನ್ನು ಶ್ರೇಷ್ಠ' ಮತ್ತು ಸಾಮಾನ್ಯ ಎಂಬ ತರತಮ ದೃಷ್ಟಿಯಲ್ಲಿ ನಡೆಸಿಕೊಳ್ಳುವುದೇ ಮೂಲಭೂತವಾಗಿ ತಪ್ಪಾಗುತ್ತದೆ. ಇದಕ್ಕೆ ವಚನ ಸಾಹಿತ್ಯದಲ್ಲಿ ವಿಫುಲವಾದ ಆಧಾರಗಳು ಕೂಡ ಇವೆ. ಅರ್ಥಾಥ್ ಗುರುವೆಂಬ ಒಬ್ಬ ವ್ಯಕ್ತಿಯ ಕಾಯಕ ಹೇಗೋ ಹಾಗೆಯೇ ಶಿಷ್ಯನೆಂಬ ಇನ್ನೊಬ್ಬ ವ್ಯಕ್ತಿಯ ಕಾಯಕ ಕೂಡ ಇಬ್ಬರ ಕಾಯಕಗಳು ಬೇರೆ ಬೇರೆಯಾದರೂ ಸಾಮಾಜಿಕ–ಧಾರ್ಮಿಕವಾದ ಯಾವುದೇ ವ್ಯತ್ಯಾಸಗಳಿಂದ ಅವು ದೂರ. ಪರಸ್ಪರ ಸಾಮಾಜಿಕ ನಡವಳಿಕೆಯಲ್ಲಿ ಅಚಲ ಸಾಮ್ಯ (ಅಂದರೆ ವೈದಿಕ ಧರ್ಮ ಸಮಾಜದ ವ್ಯತ್ಯಾಸಗಳು ಈ ಮಾತಿನ ಹಿಂದಿವೆ). ಅದೇ ಸಂದರ್ಭದಲ್ಲಿ ನಿಷ್ಕಾಮಕರ್ಮ ಎಂಬ ವೈದಿಕ ಧರ್ಮದ ಕಾರ್ಮಿಕ ಸಿದ್ಧಾಂತವನ್ನು ಶರಣಧರ್ಮ ಒಪ್ಪುವುದಿಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ದಂಡಿಯಲೇಬೇಕು. ಹಾಗೆ ದುಡಿದ ವ್ಯಕ್ತಿ ತತ್ಫಲವನ್ನು ಪಡೆಯಲೇಬೇಕು. ಆದರೆ ಹಾಗೆ ಪಡೆದುಕೊಳ್ಳುವುದನ್ನು ತನ್ನ ಅಗತ್ಯಕ್ಕಿಂತ ಹೆಚ್ಚು ಪಡೆಯುವಂತಿಲ್ಲವೆಂಬ ಎಚ್ಚರ ಮಾತ್ರ ಸದಾ ಅವನಲ್ಲಿ ಜಾಗೃತವಾಗಿರಬೇಕು.

**ಪರಾಮರ್ಶನ ಗ್ರಂಥಗಳು**


- ಕಲಬುರ್ಗಿ ಎಂ.ಎಂ.. (1988). ಮಾರ್ಗ ಸಂಪುಟ: 1, ನರೇಶ ಆ್ಯಂಡ್ ಕಂಪನಿ, ಬೆಂಗಳೂರು.
- ಎಂ.ಆರ್. ಶ್ರೀನಿವಾಸಮೂರ್ತಿ. (1977). ವಚನಧರ್ಮಸಾರ. ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
- ಫ.ಗು. ಹಳಕಟ್ಟಿ. (1952). ಶಿವಶರಣರ ಚರಿತ್ರೆಗಳು ಭಾಗ–2. ಹಿತ ಚಿಂತನ ಪ್ರಿಂಟಿಂಗ್ ಪ್ರೆಸ್, ವಿಜಾಪುರ.
- ಫ.ಗು. ಹಳಕಟ್ಟಿ. (1964). ಶಿವಶರಣರ ಚರಿತ್ರೆಗಳು ಭಾಗ–4 ಹಿತ ಚಿಂತನ ಪ್ರಿಂಟಿಂಗ್ ಪ್ರೆಸ್, ವಿಜಾಪುರ.
- ಎಸ್. ವಿದ್ಯಾಶಂಕರ. (1993). ಸಂಕೀರ್ಣ ವಚನ ಸಂಪುಟ–2. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
- ಬಿ.ಆರ್. ಹಿರೇಮಠ. (1993). ಸಂಕೀರ್ಣ ವಚನ ಸಂಪುಟ–3, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.